**ಓ.ಎಸ್. 18/2017,      ಪಿ.ಡಬ್ಲೂ-1           ಹೆಸರುಃ ಪ್ರಭುಲಿಂಗಯ್ಯ.ಎಂ.ಕೆ.**

**ದಿಃ28-10-2024 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು ಪ್ರತಿವಾದಿಯರ ಪರ ಶ್ರೀ ಎ.ವೈ.ಆರ್.  ವಕೀಲರಿಂದಃ**

ಸಾಕ್ಷಿ ನಿಪಿ.1 ರಲ್ಲಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ನಿಪಿ.1(ಬಿ) ರಿಂದ 1(ಡಿ) ಎಂದು ಗುರುತಿಸಲಾಯಿತು. ನಿಪಿ.1 ಜಾರಿಯಾದ ನಂತರ ನಾನು ಪ್ರತಿವಾದಿಗೆ ದಾವಾ ಸ್ವತ್ತಿನ ಕುರಿತು ಕ್ರಯದ ಕರಾರು ಪತ್ರವನ್ನು ಜಾರಿಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ದಿನಾಂಕ 08.05.2013 ರ ಕರಾರು ಪತ್ರದಲ್ಲಿನ ಸಹಿಯನ್ನು ತೋರಿಸಲಾಗಿ ಸದರಿ ಸಹಿ ತನ್ನದಲ್ಲ ಎಂದು ಹೇಳಿರುತ್ತಾರೆ. ಎಂ.ಕೆ.ಪ್ರಭುಲಿಂಗಯ್ಯ ಬಿನ್ ಲೇಟ್ ಕರಿಬಸವಯ್ಯ, ದಾಸಿಕಟ್ಟೆ ಗ್ರಾಮ, ಹೊಳಲ್ಕೆರೆ ತಾಲ್ಲೂಕು ನನ್ನ ವಿಳಾಸ ಎಂಬುದು ಸರಿ. ನಿಪಿ.1 ರ ಕ್ರಯದ ಕರಾರು ಪತ್ರ ದಾವಾ ಅನುಸೂಚಿತ ಸ್ವತ್ತಿನ ಕುರಿತು ನಮೂದು ಇದೆ ಎಂದರೆ ಸರಿ. ನಿಪಿ.1 ರ ಕ್ರಯದ ಕರಾರು ಪತ್ರದ ಸ್ವತ್ತಿನ ಕುರಿತು ನಾನು ಪ್ರತಿವಾದಿಗೆ ದಿನಾಂಕ 08.05.2013 ರಂದು ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅಳಿಯನಾದ ಹಾಲಸ್ವಾಮಿ ಮತ್ತು ಗುಂಡೇರಿ ಗ್ರಾಮದ ಸತೀಶ್ ಬಿನ್ ಗುರುಶಾಂತಪ್ಪ ರವರ ಸಮಕ್ಷಮ ನಾನು ದಿ.08.05.2013 ರಂದು ಕ್ರಯದ ಕರಾರು ಪತ್ರವನ್ನು ಜಾರಿಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ಹೆಸರಿಗೆ ದಿ.08.05.2013 ರಂದು ಕ್ರಯದ ಕರಾರು ಪತ್ರವನ್ನು ಜಾರಿಮಾಡಿಕೊಟ್ಟಿದ್ದಾಗ್ಯೂ ಸಹ ಅದನ್ನು ಒಪ್ಪಿಕೊಂಡರೆ ನನ್ನ ಪ್ರಕರಣಕ್ಕೆ ವ್ಯತಿರಿಕ್ತತೆ ಆಗುತ್ತದೆ ಎಂದು ನಾನು ಪ್ರತಿವಾದಿಯ ಹೆಸರಿಗೆ ಕ್ರಯದ ಕರಾರು ಪತ್ರವನ್ನು ಜಾರಿಮಾಡಿಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಪ್ರತಿವಾದಿ ಪದವಿಪೂರ್ವ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದರೆ ಸರಿ. 2016 ನೇ ಸಾಲಿನಲ್ಲಿ ಪ್ರತಿವಾದಿ ಯಾವ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದರು ಎಂದು ಗೊತ್ತಿಲ್ಲ. 2013 ನೇ ಸಾಲಿನಲ್ಲಿ ಹೊಳಲ್ಕೆರೆಯ ಪದವಿಪೂರ್ವ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದರು. ದಿನಾಂಕ 26.07.2016 ರಂದು ಪಟ್ಟಣ ಪಂಚಾಯಿತಿ ಹೊಳಲ್ಕೆರೆ ರವರು ಹಿಂಬರಹ ನೀಡಿದ ನಂತರ ನಾನು ಪ್ರತಿವಾದಿಯನ್ನು ಆತನ ಮನೆಯಲ್ಲಿ ಭೇಟಿ ಮಾಡಡಲು ಹೋಗಿದ್ದು,

ಸಿಕ್ಕಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಮನೆಯಲ್ಲಿ ಆತನ ಪತ್ನಿ ಇರುತ್ತಿದ್ದರು. ನಾನು ಪ್ರತಿವಾದಿಯ ಮನೆಯನ್ನು ನೋಡಿದ್ದು, ಆತನ ಪತ್ನಿಯ ಬಳಿ ದಾವೆಯ ವಿಚಾರದ ಕುರಿತು ಹೇಳಿದ್ದೇನೆ. ಪ್ರತಿವಾದಿಯ ಪತ್ನಿ ಪ್ರತಿವಾದಿ ಎಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ನನಗೆ ವಿಳಾಸವನ್ನು ಸರಿಯಾಗಿ ಹೇಳುತ್ತಿರಲಿಲ್ಲ. ನಾನು ಪ್ರತಿವಾದಿಯ ಮನೆಗೆ ಹೋಗಿಲ್ಲ ಹಾಗೂ ಪ್ರತಿವಾದಿಯ ವಿಳಾಸದ ಕುರಿತು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ, ಆದಾಗ್ಯೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ಮನೆಗೆ ಭೇಟಿ ನೀಡಿರುವ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ತೊಂದರೆ ನೀಡುವ ಸಲುವಾಗಿ ಪ್ರತಿವಾದಿಯ ವಿರುದ್ಧ ಪೊಲೀಸ್ ಠಾಣೆಗೆ ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

3. ನಾನು ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಪ್ರತಿವಾದಿಯ ಸ್ನೇಹಿತರ ಮೂಲಕ ವ್ಯಾಜ್ಯವನ್ನು ರಾಜೀ ಮಾಡಿಕೊಳ್ಳುವ ಕುರಿತು ಪ್ರಯತ್ನ ಮಾಡಿಲ್ಲ. ದಾವಾ ಅನುಸೂಚಿತ ಸ್ವತ್ತಿನಲ್ಲಿನ ಮನೆಯನ್ನು 2014 ರಲ್ಲಿಯೇ ಸಂಪೂರ್ಣವಾಗಿ ನಿರ್ಮಿತಿ ಮಾಡಲಾಗಿತ್ತು ಎಂದರೆ ಸಾಕ್ಷಿ ನಾನು ಶಿಕಾರಿಪುರದಲ್ಲಿ ಇದ್ದ ಕಾರಣ ಗಮನಿಸಿಲ್ಲ ಎಂದು ಹೇಳುತ್ತಾರೆ. ಸದರಿ ಮನೆಯ ಗೃಹಪ್ರವೇಶಕ್ಕೆ ನನ್ನನ್ನು ಸಹ ಆಮಂತ್ರಣ ಮಾಡಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿ ನನ್ನಿಂದ ಪಡೆದ ಸಾಲವನ್ನು ಹಿಂತಿರುಗಿಸಲು ಕಾಲಾವಕಾಶ ಕೋರಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಗೆ ಕಾಲವಕಾಶ ನೀಡದೆ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ